# ರಾಮನಾಮ ಪಾಯಸಕ್ಕೆ

ರಾಮನಾಮ ಪಾಯಸಕ್ಕೆ ಕೃಷ್ಣನಾಮ ಸಕ್ಕರೆ ।
ವಿಠಲನಾಮ ತುಪ್ಪ ಬೆರಸಿ ಬಾಯಿ ಚಪ್ಪರಿಸಿರೋ ॥ ಪ ॥

ಒಮ್ಮನ ಗೋಧಿಯ ತಂದು ।
ವೈರಾಗ್ಯ ಕಲ್ಲಲಿ ಬೀಸಿ ।
ಸುಮ್ಮನ ಸಜ್ಜಿಗೆಯ ತೆಗೆದು ।
ಶಾವಿಗೆಯ ಮಾಡಿರೋ ॥ ೧ ॥

ಹೃದಯವೆಂಬ ಪಾತ್ರದಲ್ಲಿ ।
ಭಾವವೆಂಬ ಎಸರನಿಕ್ಕಿ ।
ಬುದ್ಧಿಯಿಂದ ಪಾಕ ಮಾಡಿ ಅನಿ ।
ರುದ್ಧ ಹರಿಯ ನೆನೆಯಿರೋ ॥ ೨ ॥

ಆನಂದ ಆನಂದ ।
ತೇಗು ಬಂದವೆರಡು ಆ ।
ನಂದ ಮೂರುತಿ ಪುರಂದರ ।
ವಿಠಲನ ನೆನೆಯಿರೋ ॥ ೩ ॥